**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸಲೀಂ ಅಹ್ಮದ್ ಇವರುನಿಯಮ 72ರ ಅಡಿಯಲ್ಲಿ ನೀಡಿರುವ ಗಮನ ಸೆಳೆಯುವ ಸೂಚನೆ ಮೇಲಿನ ಹೇಳಿಕೆ**

ವಿಷಯ : ರಾಜ್ಯಾದ್ಯಂತ ಇಲ್ಲಿಯವರೆವಿಗೆ ಸ್ಥಾಪಿಸಲಾಗಿರುವ ಶುದ್ಧ ನೀರಿನ ಘಟಕಗಳಿನ ಸ್ಥಿತಿ ಮತ್ತು ಕಾರ್ಯಕ್ಷಮತೆಯ ಮೌಲ್ಯಮಾಪನವನ್ನು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ನಡೆಸಿ, ಅದರ ವರದಿಯಂತೆ, ಶುದ್ಧ ಕುಡಿಯುವ ನೀರಿನ ಘಟಕಗಳ ಪೈಕಿ ಶೇ.79.12ರಷ್ಟು ಘಟಕಗಳು ಶುದ್ಧ ನೀರಿನ ಮೂಲವನ್ನೇ ಹೊಂದಿಲ್ಲ ಎಂಬ ಕಳವಳಕಾರಿ ಸಂಗತಿಯು ಬೆಳಕಿಗೆ ಬಂದಿರುತ್ತದೆ.

ಪ್ರಸ್ತುತ ಸ್ಥಾಪಿಸಲಾಗಿರುವ ಶುದ್ಧ ನೀರಿನ ಘಟಕಗಳ ಪೈಕಿ ಬಹಳಷ್ಟು ಘಟಕಗಳು ಕಾರ್ಯನಿರ್ವಹಿಸದೇ ಸ್ಥಗಿತಗೊಂಡಿದ್ದು, ಕೇವಲ ಘಟಕಗಳಷ್ಟೇ ಸರಿಯಾಗಿ ಕಾರ್ಯನಿರ್ವಹಿಸುತ್ತಿವೆ. ಅನೇಕ ಶುದ್ಧ ನೀರಿನ ಘಟಕಗಳನ್ನು ಕಾನೂನಿನಂತೆ ಟೆಂಡರ್ ಗಳನ್ನು ಕರೆಯದೇ, ಹೆಚ್ಚಿನ ಹಣವನ್ನು ವೆಚ್ಚಮಾಡಿ ನಿರ್ಮಿಸಲಾಗಿದೆ. ಐಎಸ್‌ಓ ಪ್ರಮಾಣೀಕೃತ ಉಪಕರಣಗಳನ್ನು ಅಳವಡಿಸದೇ ಹಾಗೂ ಸಮಯಕ್ಕನುಗುಣವಾಗಿ ಶುದ್ಧ ನೀರಿನ ಘಟಕಗಳನ್ನು ನಿರ್ವಹಣೆ ಮಾಡದೇ ರಾಜ್ಯದ ಜನರಿಗೆ ಕಲುಷಿತ ನೀರನ್ನು ಸರಬರಾಜು ಮಾಡುತ್ತಿರುವ ವಿಚಾರವು ಗಂಭೀರವಾಗಿರುವ ಬಗ್ಗೆ.

********

**ಹೇಳಿಕೆ:** ದಿನಾಂಕ:07.12.2020ರಲ್ಲಿ ಗ್ರಾ.ಕು.ನೀ&ನೈ ಇಲಾಖೆಯಿಂದ ಪ್ರಾದೇಶಿಕ ಆಯುಕ್ತರು ಹಾಗೂ ಕಾರ್ಯದರ್ಶಿಗಳು, ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಕಲಬುರ್ಗಿ, ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೂ ಮತ್ತು ಎಲ್ಲಾ ಜಿಲ್ಲಾ ಪಂಚಾಯಿತ್ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳಿಗೂ ವಿಳಾಸಿಸಿ ಸೂಚಿಸಿರುವ ಪತ್ರದಲ್ಲಿ ಎನ್.ಜಿ.ಟಿ ಆದೇಶದನ್ವಯ ಕಲುಷಿತವಾದ ಜಲಮೂಲಗಳಿರುವ ಗ್ರಾಮಗಳಿಗೆ ದಿನಾಂಕ:31.12.2020ರೊಳಗೆ ತಪ್ಪದೇ ಕುಡಿಯುವ ನೀರನ್ನು ಒದಗಿಸಬೇಕಾಗಿರುವ ನಿರ್ದೇಶನದ ಹಿನ್ನೆಲೆಯಲ್ಲಿ ಜಲಮೂಲದ ನೀರಿನ ಮಾದರಿಯನ್ನು ಜಿಲ್ಲಾ ಕುಡಿಯುವ ನೀರು ಪರೀಕ್ಷಾ ಪ್ರಯೋಗಾಲಯದಲ್ಲಿ ಪರೀಕ್ಷಿಸಿ ಮತ್ತು ಅದೇ ನೀರಿನ ಮಾದರಿಯನ್ನು NABL Accredited ಪರೀಕ್ಷಾ ಪ್ರಯೋಗಾಲಯದಲ್ಲಿ ಹಾಗೂ KSPCB ಪ್ರಯೋಗಾಲಯಗಳಲ್ಲಿ ಪರೀಕ್ಷಿಸುವುದು ಮತ್ತು ಅದನ್ನು ಆಧರಿಸಿ ಶುದ್ಧ ಕುಡಿಯುವ ನೀರಿನ ಘಟಕಗಳ ಅಗತ್ಯತೆಯ ಬಗ್ಗೆ ದೃಢೀಕರಿಸಿ ಸಲ್ಲಿಸಲು ನಿರ್ದೇಶಿಸಲಾಗಿದೆ. ಅದರಂತೆ, ಸ್ವೀಕೃತವಾದ ಪ್ರಸ್ತಾವನೆಗಳನ್ನು ಮಾತ್ರ ಪರಿಶೀಲಿಸಿ ಹೊಸ ಶುದ್ಧ ಕುಡಿಯುವ ನೀರಿನ ಘಟಕಗಳಿಗೆ ಅನುಮೋದನೆ ನೀಡಲಾಗುತ್ತಿದೆ.

ಅಕ್ಟೋಬರ್-2022ರ ಅಂತ್ಯಕ್ಕೆ ಗ್ರಾ.ಕು.ನೀ&ನೈ ಇಲಾಖೆಯಿಂದ ಕಾರ್ಯಚರಣೆ ಮತ್ತು ನಿರ್ವಹಣೆ ವಹಿಸುವಂತೆ ರಾಜ್ಯದಲ್ಲಿನ 16881 ಶುದ್ಧ ಕುಡಿಯುವ ನೀರಿನ ಘಟಕಗಳು ಕಾರ್ಯಾಚರಣೆಯಲ್ಲಿದ್ದು, 1,583 ಘಟಕಗಳು ತಾತ್ಕಾಲಿಕವಾಗಿ ಸ್ಥಗಿತವಾಗಿರುತ್ತದೆ. ಅದರಂತೆ,

ಶೇ.91.00 ರಷ್ಟು ಕಾರ್ಯನಿರ್ವಹಿಸುತ್ತಿದ್ದು, ಶೇ.9.00ರಷ್ಟು ಸ್ಥಗಿತಗೊಂಡಿರುತ್ತವೆ. ಜಿಲ್ಲಾವಾರು ಮಾಹಿತಿಗಳನ್ನು ಪರಿಶೀಲಿಸಿದಾಗ ಜಲಮೂಲದ ಕೊರತೆಯಿಂದ, ವಿದ್ಯುದ್ದೀಕರಣದ ಕಾರಣದಿಂದಾಗಿ, ಘಟಕಗಳ ನಿರ್ವಹಣೆ ವಹಿಸಿರುವ ಗುತ್ತಿಗೆದಾರರು/ಸಂಘ ಸಂಸ್ಥೆಯ ವೈಫಲ್ಯದಿಂದ ಘಟಕಗಳು ತಾತ್ಕಲಿಕವಾಗಿ ಸ್ಥಗಿತಗೊಂಡಿರುತ್ತವೆ. ಹಾಗೂ ಶುದ್ಧ ಕುಡಿಯುವ ನೀರಿನ ಘಟಕಗಳಿಂದ ಹೊರಬರುವ ನೀರಿನ ಪರೀಕ್ಷೆಯನ್ನು ಕಾಲಕಾಲಿಕವಾಗಿ ನಿರ್ವಹಣೆ ಗುತ್ತಿಗೆದಾರರು ಕರಾರಿನ್ವಯ ಕೈಗೊಂಡು ದಾಖಲಿಸುತ್ತಿರುವುದನ್ನು ಖಚಿತ ಪಡಿಸಿಕೊಳ್ಳಲಾಗುತ್ತಿದ್ದು, ಬಳಕೆದಾರರಿಂದ ದೂರು ಬಂದಂತಹ ಸಂಧರ್ಭಗಳಲ್ಲಿಯೂ ಕುಡಿಯುವ ನೀರನ್ನು ಪರೀಕ್ಷೆಗೆ ಒಳಪಡಿಸಲಾಗುತ್ತಿದೆ.

ದಿನಾಂಕ:31-01-2022ರ ಪತ್ರದಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ರವರು ಕೇಳಿದಂತೆ ಒಟ್ಟು 18,490 ಶುದ್ಧ ಕುಡಿಯುವ ನೀರಿನ ಘಟಕಗಳ ಪೈಕಿ ಗ್ರಾ.ಕು.ನೀ&ನೈ ಇಲಾಖೆಯಿಂದ 8,785 ಘಟಕಗಳನ್ನು ಅನುಷ್ಠಾನಗೊಳಿಸಿ 13,580 ಘಟಕಗಳನ್ನು ನಿರ್ವಹಣೆ ಮಾಡಲಾಗುತ್ತಿರುವ ಬಗ್ಗೆ ತಿಳಿಸಲಾಗಿರುತ್ತದೆ. ಗ್ರಾ.ಕು.ನೀ&ನೈ ಇಲಾಖೆಗೆ ಸಂಬಂಧಿಸಿದ 8785 ಘಟಕಗಳ ಉಪಕರಣಗಳಿಗೆ BIS/ISO ಪ್ರಮಾಣೀಕೃತ ಪಡೆಯಲಾಗಿದೆ ಹಾಗೂ ಎಲ್ಲಾ ಘಟಕಗಳು ನೀರಿನ ಮೂಲ ಕಲುಷಿತವೆಂದು ವರದಿಯನ್ನಾಧರಿಸಿ ಸ್ಥಾಪಿಸಲಾಗಿದೆ ಎಂಬ ಮಾಹಿತಿಯನ್ನು ನೀಡಲಾಗಿದೆ.

ಲಭ್ಯವಾದ ಮಾಹಿತಿಯಂತೆ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಅಳವಡಿಸುವಲ್ಲಿ ಗ್ರಾ.ಕು.ನೀ&ನೈ ಇಲಾಖೆಯಿಂದ ನಿಯಮಾನುಸಾರ ಕ್ರಮ ಜರುಗಿಸಿದ್ದು, ಕರಾರು ಉಲ್ಲಂಘನೆಯಾದ ಪ್ರಕರಣಗಳಲ್ಲಿ ಸೂಕ್ತ ಕ್ರಮವನ್ನು ಜರುಗಿಸುವುದಲ್ಲದೆ ಕಾರಣಾಂತರಗಳಿಂದ ಸ್ಥಗಿತವಾದ ಘಟಕಗಳನ್ನು ಕಾಲಕಾಲಕವಾಗಿ ಅನುದಾನ ಒದಗಿಸಿ ಸುಸ್ಥಿತಿಯಲ್ಲಿಡಲು ಕ್ರಮ ಜರುಗಿಸಲಾಗುತ್ತಿದೆ.

ಕಡತ ಸಂಖ್ಯೆ:ಗ್ರಾಕುನೀ&ನೈಇ 610 ಗ್ರಾನೀಸ(4)2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ

63 C